ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 17ನೆ ಆಗಸ್ಟು 1903.

ನಂ. 119—1317, ಸ್ರ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಶನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರು ಸೀಮೆಯ ಫೀನವೆಸ್ಟ್ಮೆಂಟ್ ಮುಕಾರಾಜಾ ಸರ್ಕಾರಗಳು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಜಕ್ಕು ಬಂದಿಯುಳ್ಳ ಪ್ರದೇಶವು 1903ನೆ ಸೆಪ್ಟೆಂಬರ್ ಗುರ್ರೆ ಲಾಗಾಯತ್ತು ಸದರಿ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟ್ಗಿರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ.

ಷೆಡ್ಯೂಲ್.

ಜಿಲ್ಲೆಯು.	ತಾಲ್ಲೂಕು ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಜಕ್ಕು ಬಂದಿ.
ಚಿತ್ರದುರ್ಗ.	ಹೊಳಲಕೆರೆ ತಾಲ್ಲೂಕು.	೨೬ ಚದರ ಮೈಲಿ.	ಗರ್ಗಾಕಾವಲ್.	ಉತ್ತರಕ್ಕೆ.—ಗರ್ಗಾ ಗ್ರಾಮದ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸದರೀ ಗ್ರಾಮದ ಸರ್ವೆ ನಂ. 1, 2, 12 ವ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖ್ಯೆರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಗರ್ಗದ ಸರ್ವೆ ನಂ. 16, ಗಿಲ್ಕೀನಹಳ್ಳಿಯ ಸರ್ವೆ ನಂ. 44, 43 ವ 42 ಮತ್ತು ಹಾಲೇಹಳ್ಳಿಯ ಸರ್ವೆ ನಂ. 41 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಕೇವಲ ದಕ್ಷಿಣ ಮೂಲೆಗೆ ಹೋಗುತ್ತದೆ. ಆಮೇಲೆ ಹಾಲೆಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ಹೊಳಲಕೆರೆಯ ಸರ್ವೆ ನಂ. 276ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 274ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಹೊಳಲಕೆರೆಯ ಸರ್ವೆ ನಂ. 274 ವ 273, ಚೀರನಹಳ್ಳಿಯ ಸರ್ವೆ ನಂ. 27, ಜೆಟ್ಟಿಹಳ್ಳಿಯ ಸರ್ವೆ ನಂ. 12 ಮತ್ತು ಹಾರೇನಹಳ್ಳಿಯ ಸರ್ವೆ ನಂ. 30 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಪರಾ. ಎ.—ಹಾಡಿಯು ಇದರಡೀ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತವೆ :—

(1) ಹೊಳಲಕೆರೆ ಮತ್ತು ಹಾಲೆಹಳ್ಳಿ ಗ್ರಾಮಗಳಿಂದ ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯುಲ್ಲಿರುವ ಆಂಜನೇಯ ದೇವಸ್ಥಾನದವರೆವಿಗೆ ಸುಮಾರು 1 ಫರ್ಲಾಂಗಿನ ಉದ್ದವಾದ ಮತ್ತು 8 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ಪ ದನಗಳಿಗೂ ಬಿಟ್ಟಿರುತ್ತದೆ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 50 ಗಜಗಳ ಫಾಸಲೆಯಲ್ಲಿ ಹಾಲೆಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(2) ಗಿಲ್ಕೀನ ಹಳ್ಳಿಯಿಂಬ ಆರಸಿಕಟ್ಟೆಯ ವರೆವಿಗೆ 12 ಅಡಿಗಳ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಗಿಲ್ಕೀನಹಳ್ಳಿಯ ಸರ್ವೆ ನಂ. 44ರ ಪಶ್ಚಿಮ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು $3\frac{1}{2}$ ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ವಾಯುವ್ಯ ದಿಕ್ಕಾಗಿ ಸುಮಾರು ಅರ್ಧಮೈಲಿ ದೂರ ಹೋಗಿ ಗರ್ಗಾ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಗಿಲ್ಕೀನಹಳ್ಳಿಯಿಂದ ಹಾರೇನಹಳ್ಳಿ ವರಿವಿಗೆ 12 ಅಡಿ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಸ್ಟೇಟ್ ಫಾರೆಸ್ಟನ್ನು ಗಿಲ್ಕೀನಹಳ್ಳಿಯ ಸರ್ವೆ ನಂ. 43ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 150 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮದಿಕ್ಕಾಗಿಯೂ ವಾಯುವ್ಯ ದಿಕ್ಕಾಗಿಯೂ ಸುಮಾರು 1 ಮೈಲಿ ಹೋಗಿ ಹಾರೇನಹಳ್ಳಿಯ ಸರ್ವೆ ನಂ. 30ರ ಪೂರ್ವ ಪಾರ್ಶ್ವದಲ್ಲಿ ಅದರ ಆಗ್ನೇಯ ಮೂಲೆಯಿಂದ ಸುಮಾರು 200 ಗಜಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(4) ಗಿಲ್ಕೀನಹಳ್ಳಿಯಿಂದ ಚೀರನಹಳ್ಳಿ ವರಿವಿಗೆ 6 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ಮತ್ತು ದನಗಳಿಗೂ ಬಿಟ್ಟಿರುತ್ತೆ. ಈ ಹಾದಿಯು ಫಾರೆಸ್ಟನ್ನು ಗಿಲ್ಕೀನಹಳ್ಳಿಯ ಸರ್ವೆ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಸುಮಾರು 1 ಮೈಲಿ ದೂರ ಹೋಗಿ ಚೀರ್ನಹಳ್ಳಿಯ ಸರ್ವೆ ನಂ. 27ರ ಆಗ್ನೇಯ ಮೂಲೆಯಿಂದ ಸುಮಾರು 2 ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಬಿ. ಇದರಡೀ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದ ಸವಿಾಪದಲ್ಲಿ $1\frac{1}{2}$ ಎಕರೆ ಪೈಕಿ ದಂಡು ಇಳಿಯುವ ಭೂಮಿಯು ಬಿಡಲ್ಪಟ್ಟು ಆವರ್ಣವಾಗಿ ಎಣಿಸಲ್ಪಟ್ಟಿರುತ್ತದೆ.

ಹುಕುಂ ಬಮೋಜಿಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರಟೆರಿ.